# ಕರ್ನಾಟಕ ವಿಧಾನ ಪರಿಷತ್ತು

1) ~~ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ~~ : 17
2) ಸದಸ್ಯರ ಹೆಸರು : ಶ್ರೀ. ಸುನೀಲ್ ಸುಬ್ರಮಣಿ ಎಂ.ಪಿ
3) ಉತ್ತರಿಸಬೇಕಾದ ದಿನಾಂಕ : 12.07.2018
4) ಉತ್ತರಿಸುವವರು : ಮಾನ್ಯ ಮುಖ್ಯ ಮಂತ್ರಿ

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮೈಸೂರು-ತಲಚೇರಿ ನಡುವಿನ ರೈಲ್ವೆ ಮಾರ್ಗದ ಸರ್ವೆ ಕಾರ್ಯ ನಡೆಯುತ್ತಿರುವುದು ನಿಜವೇ: ಹಾಗಿದ್ದಲ್ಲಿ ಈ ಸರ್ವೆ ಕಾರ್ಯಕ್ಕೆ ಸಂಬಂಧಿಸಿದಂತೆ ಅನುಮತಿ ನೀಡಿರುವುದು ಯಾರು: (ಸಂಪೂರ್ಣ ವಿವರ ನೀಡುವುದು.)</td><td>ಮೈಸೂರು-ತಲಚೇರಿ ರೈಲು ಮಾರ್ಗ ಸರ್ವೆ ಕಾರ್ಯ ನಡೆಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವತಿಯಿಂದ ಯಾವುದೇ ಅನುಮತಿಯನ್ನು ನೀಡಲಾಗಿಲ್ಲ</td></tr>
<tr><td>ಆ</td><td>ಜಿಲ್ಲೆಯ ದಕ್ಷಿಣ ಕೊಡಗಿನ ಕೆಲವು ಭಾಗಗಳಲ್ಲಿ ಖಾಸಗಿ ಕಂಪನಿಯ ಸಿಬ್ಬಂದಿಗಳ ತಂಡ ಸರ್ವೆಕಾರ್ಯ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಸರ್ವೆ ಕಾರ್ಯವನ್ನು ನಿಲ್ಲಿಸುವಲ್ಲಿ ಸರ್ಕಾರದ ಕ್ರಮಗಳೇನು:</td><td>ಹೌದು.<br>ಅನುಮತಿಯಿಲ್ಲದೆ ಸರ್ವೆ ಕಾರ್ಯ ನಡೆಸುವ ತಂಡವನ್ನು ಕಾನೂನಿನ್ವಯ ಸ್ಥಗಿತಗೊಳಿಸಲಾಗುವುದು.</td></tr>
<tr><td>ಇ</td><td>ಈ ಮೈಸೂರು-ತಲಚೇರಿ ರೈಲ್ವೆ ಮಾರ್ಗದ ವಿಷಯದಲ್ಲಿ ರೈಲ್ವೆ ಇಲಾಖೆಯಿಂದ ರಾಜ್ಯ ಸರ್ಕಾರದ ನಡುವೆ ಆಗಿರುವ ಪತ್ರಗಳ ವಿವರ ನೀಡುವುದು: ಇದರಲ್ಲಿ ರಾಜ್ಯ ಸರ್ಕಾರದ ನಿಲುವೇನು? ವಿವರ ನೀಡುವುದು.</td><td>ರೈಲ್ವೆ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಪತ್ರಗಳ ವಿವರ
<table>
<tr><th>ಕ್ರ.ಸ</th><th>ಪತ್ರ ಸಂಖ್ಯೆ:</th><th>ದಿನಾಂಕ:</th><th>ವಿಷಯ</th></tr>
<tr><td>1</td><td>W.337/CN/ERS/JV</td><td>29.09.2016</td><td>ಈ ಯೋಜನೆಯು ದಕ್ಷಿಣ ರೈಲ್ವೆಯ ವ್ಯಾಪ್ತಿಗೆ ಒಳಪಡುವ ಬಗ್ಗೆ ಮಾಹಿತಿ ನೀಡಿರುವುದು.</td></tr>
<tr><td>2.</td><td>W.359/CN/BNC/WPR/2016-17/533</td><td>19.09.2016</td><td>ಯೋಜನೆಗೆ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳದಿರುವುದರಿಂದ ಅನುದಾನದ ಅವಶ್ಯಕತೆ ಇಲ್ಲದಿರುವುದರ ಬಗ್ಗೆ.</td></tr>
<tr><td>3.</td><td>W.193/CN/BNC/Genl</td><td>23.10.2017</td><td>ಈ ಯೋಜನೆಯು ನೈರುತ್ಯ ರೈಲ್ವೆ ಇಲಾಖೆಯ ವ್ಯಾಪ್ತಿಗೆ ಒಳಪಡದೇ ಇರುವುದರಿಂದ ದಕ್ಷಿಣ ರೈಲ್ವೆ. ಕೆಆರ್‌ಡಿಸಿಎಲ್ ಕೇರಳ ಇಲ್ಲಿನ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸುವಂತೆ ಕೋರಿ.</td></tr>
</table>
ಈ ಯೋಜನೆಯ ಅನುಷ್ಠಾನದ ಬಗ್ಗೆ ಸ್ಥಳೀಯರ ಭಾವನೆ. ಯೋಜನೆ ಅನುಷ್ಠಾನದಿಂದ ವನ್ಯಜೀವಿ ಹಾಗೂ ಪರಿಸರದ ಮೇಲಾಗುವ ಪರಿಣಾಮ ಮತ್ತು ರಾಜ್ಯ ಸರ್ಕಾರದ ಮೇಲಾಗುವ ಆರ್ಥಿಕ ಪರಿಣಾಮ ಇತ್ಯಾದಿ ಪ್ರಮುಖವಾದ ಅಂಶಗಳನ್ನು ಪರಿಗಣಿಸಿ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು.</td></tr>
</table>

ಸಂಖ್ಯೆ: ಮೂಅಇ 91 ರಾರಾಹೆ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯ ಮಂತ್ರಿ